**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 916/2024**

ಸಿಡಬ್ಲ್ಯೂ-01/ಪಿಡಬ್ಲ್ಯೂ-01

| | |
|---|---|
| ಸಾಕ್ಷಿದಾರರ ಹೆಸರು | ವೀರೇಶ ಮಲಕಣ್ಣನವರ |
| ತಂದೆ ಹೆಸರು | ಶಿವಬಸಪ್ಪ |
| ವಯಸ್ಸು | 28 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಶಂಕ್ರಿಕೊಪ್ಪ ಗ್ರಾಮ |

**ದಿನಾಂಕ : 14-08-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ**

1. ಚಾಸಾ-2 ಮತ್ತು 3 ರವರು ನನಗೆ ಪರಿಚಯ. ಚಾಸಾ-4 ಅಣ್ಣ ಮತ್ತು ಚಾಸಾ-5 ನನ್ನ ತಂದೆ. ಚಾಸಾ-6 ನನ್ನ ತಾಯಿ, ಚಾಸಾ-7 ರವರು ನನ್ನ ಅಜ್ಜಿ. ಚಾಸಾ-8 ರಿಂದ 10 ರವರು ನನಗೆ ಪರಿಚಯ ಇರುತ್ತಾರೆ.

2. ಘಟನೆ ಆಗುವ ಪೂರ್ವದಲ್ಲಿ ಒಂದು ವರ್ಷದ ಹಿಂದೆ 12 ಗುಂಟೆ ಜಾಗವನ್ನು 1 ನೇ ಆರೋಪಿಗೆ ಖರೀದಿಗೆ ಕೊಟ್ಟಿರುತ್ತೇನೆ. ಸದರಿ ಜಾಗದಲ್ಲಿ ದಾರಿಯ ವಿಚಾರವಾಗಿ ನಮ್ಮಲ್ಲಿ ಜಗಳವಾಗಿರುತ್ತದೆ. ದಿಃ 01-11-2023 ರಂದು ಗಲಾಟೆ ಆಗಿರುತ್ತದೆ. ರಾತ್ರಿ 10.30 ಗಂಟೆ ಸಮಯದಲ್ಲಿ ನಾನು, ನನ್ನ ತಂದೆ ತಾಯಿ ಮಲಗಿದಾಗ ಮಧ್ಯರಾತ್ರಿ 12.30 ಗಂಟೆ ಸಮಯದಲ್ಲಿ 1, 2, 5, 6, 7 ಹಾಗೂ ರಂಜಿತಾ ಕಾಳಂಗಿ ಹಾಗೂ

ಶಶಿಕಲಾ ನಿಂಗಪ್ಪ ಕಾಳಂಗಿ ರವರು ಬಂದು ನಮ್ಮ ಮನೆಯ ಬಾಗಿಲನ್ನು ತಟ್ಟಿರುತ್ತಾರೆ. ಆಗ ನನ್ನ ತಂದೆಯವರು ಬಂದು ಮನೆಯ ಬಾಗಿಲನ್ನು ತೆಗೆದು ನೋಡಿದಾಗ ಸದರಿ ಎಲ್ಲಾ ವ್ಯಕ್ತಿಗಳು ಕಂಡು ಬಂದಿರುತ್ತಾರೆ. ಸದರಿಯವರು ಚಾಸಾ-5 ರವರಿಗೆ ಬಾರಲೇ ಬೊಸಡಿ ಮಗನ ನಾನು ರೊಕ್ಕ ಕೊಟ್ಟ ಖರೀದಿ ಹಿಡಿದ ಜಾಗಾದಾಗ ದಾರಿ ಐತಿ ಅಂತಿರಾ ಸೂಳೆ ಮಕ್ಕಳ ಅಂತಾ ಅವಾಚ್ಯ ಶಬ್ದಗಳಿಂದ ಬೈದು, 1 ನೇ ಆರೋಪಿಯು ಚಾಸಾ-5 ರವರಿಗೆ ಬಡಿಗೆಯಿಂದ ಅವರ ಮೈಕೈಗೆ ಹೊಡೆದಿರುತ್ತಾನೆ. ಆಗ ನಾನು ಹಾಗೂ ಚಾಸಾ-4 ರವರು ಬಿಡಿಸಲು ಹೋದಾಗ 2 ನೇ ಆರೋಪಿಯು ಚಾಸಾ-4 ರವರಿಗೆ ತನ್ನ ಕೈಯಲ್ಲಿದ್ದ ಸಲಿಕೆಯಿಂದ ತಲೆಗೆ ಹೊಡೆದಿರುತ್ತಾನೆ. ಚಾಸಾ-4 ರವರಿಗೆ ಆರೋಪಿಗಳು ಅವಾಚ್ಯ ಶಬ್ದಗಳಿಂದ ಬೈದು, ನಮಗೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ನನಗೆ 1 ಮತ್ತು 2 ನೇ ಆರೋಪಿಗಳು ಹಾಗೂ ಅಲ್ಲಿಯೇ ಇದ್ದ ಎಲ್ಲರೂ ಬಡಿಗೆಯಿಂದ ಹೊಡೆದಿರುತ್ತಾರೆ. ಚಾಸಾ-6 ಮತ್ತು 7 ರವರು ಬಿಡಿಸಲು ಬಂದಾಗ 1, 2, 5, 6 ಮತ್ತು 7 ನೇ ಆರೋಪಿಗಳು ಬಡಿಗೆಯಿಂದ ಹೊಡೆದು, ಅವರ ಸೀರೆಯನ್ನು 1 ಮತ್ತು 2 ನೇ ಆರೋಪಿಯವರು ಹಿಡಿದು ಎಳೆದಾಡಿರುತ್ತಾರೆ. ಆ ಸಮಯದಲ್ಲಿ ರಂಜಿತಾ ಹಾಗೂ ಶಶಿಕಲಾ  ಎಂಬುವವರು ಅವಾಚ್ಯ ಶಬ್ದಗಳಿಂದ ಬೈದು, ಕಲ್ಲು ಹಾಗೂ ಬಡಿಗೆಯಿಂದ ಚಾಸಾ-6 ಮತ್ತು 7 ರವರಿಗೆ ಹೊಡೆದಿರುತ್ತಾರೆ. ಆ ಸಮಯದಲ್ಲಿ ಚಾಸಾ-8 ಹಾಗೂ ಅಕ್ಕಪಕ್ಕದಲ್ಲಿ ಇರುವ ಜನರು ಬಂದು ಜಗಳವನ್ನು ಬಿಡಿಸಿರುತ್ತಾರೆ. ನಂತರ ಹಾವೇರಿ ಜಿಲ್ಲಾ ಆಸ್ಪತ್ರೆಗೆ ಹೋಗಿ ನಾನು, ನನ್ನ ತಂದೆ ಹಾಗೂ ಕುಟುಂಬದವರು ಹೋಗಿರುತ್ತೇವೆ. ಚಾಸಾ-4 ರವರು ಚಿಕಿತ್ಸೆ ಪಡೆದುಕೊಂಡು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕೆ ಎಂ ಸಿ, ಹುಬ್ಬಳ್ಳಿಗೆ ಕಳುಹಿಸಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಆಡೂರು ಪೊಲೀಸ್ ಠಾಣೆಗೆ ಬಂದು ದಿಃ 02-03-2023 ರಂದು ದೂರನ್ನು ಸಲ್ಲಿಸಿರುತ್ತೇನೆ. ಗಲಾಟೆ ಆದ ಮಾರನೇ ದಿನ ನಾನು ದೂರನ್ನು ನೀಡಿರುತ್ತೇನೆ.

– 3 –

ಮರುದಿನ 3 ನೇ ತಾರೀಖು 3 ನೇ ತಿಂಗಳ ಪೊಲೀಸರು ಘಟನಾ ಸ್ಥಳಕ್ಕೆ ಬಂದಿರುತ್ತಾರೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಸಸಅ ರವರು ಸಮಯಾವಕಾಶ ಕೋರಿದ್ದು, ಮುಂದುವರೆದ  ಮುಖ್ಯ ವಿಚಾರಣೆಗೆ  ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

SD/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ